ಇಸ್ಲಾಮೀ ಸಂಸ್ಕೃತಿಯ ಸಾಮೂಹಿಕ ಮಗ್ಗುಲು

ಇಸ್ಲಾಮಿನ ಆಗಮನಕ್ಕಿಂತ ಮುಂಚೆ ಜನರು ಅಜ್ಞಾನದ ಘೋರ ಅಂಧಕಾರದಲ್ಲಿ ಜೀವಿಸುತ್ತಿದ್ದರು. ವಿಗ್ರಹಾರಾಧನೆ ಸಾಮಾನ್ಯವಾಗಿತ್ತು. ಮಾನವರು ಕನಸಿನಲ್ಲಿಯೂ ಕಲ್ಪಿಸಲಾಗದಷ್ಟು ಸಂಖ್ಯೆಯ ಮಿಥ್ಯಾರಾಧ್ಯರುಗಳು ಹುಟ್ಟಿಕೊಂಡುವು. ಅನೈತಿಕತೆ, ನಿರ್ಲಜ್ಜೆ, ಕೆಡುಕು ಮತ್ತು ಕ್ಷೋಭೆಯು ಮೇಳೈಸಿತ್ತು. ಕ್ಷೋಭೆಯು ಭೂಮಿಯ ಎಲ್ಲ ಮೂಲೆಗಳಿಗೂ ಹರಡಿತ್ತು. ಬಳಿಕ ಅಲ್ಲಾಹನು ಭೂಮಿಯಲ್ಲಿ ಹರಡಿಕೊಂಡಿರುವ ಅಂಧಕಾರವನ್ನು ತೊಲಗಿಸಲು ಒಂದು ಪ್ರಕಾಶವನ್ನು ಕಳುಹಿಸಿದನು. ತರುವಾಯ ಇಸ್ಲಾಮಿನ ಸೂರ್ಯೋದಯವಾಯಿತು ಮತ್ತು ನ್ಯಾಯ-ಸಮಾನತೆಯು ಮೇಳೈಸತೊಡಗಿತು. ಜಗತ್ತಿನ ಮೂಲೆಮೂಲೆಗಳಲ್ಲೂ ಜೀವನವು ಮರಳತೊಡಗಿತು.

ಇಸ್ಲಾಮ್ ಪರಿಪೂರ್ಣವಾದ ಸಾಮೂಹಿಕತೆಯನ್ನು ಸ್ಥಾಪಿಸಿದೆ. ಅದಕ್ಕಾಗಿ ಓರ್ವ ಸಜ್ಜನ ಮುಸ್ಲಿಮ್ ವ್ಯಕ್ತಿಯನ್ನು ಮೂಲ ಬುನಾದಿಯನ್ನಾಗಿ ಮಾಡಿತು. ಸದಾಚಾರಿ ಮುಸ್ಲಿಮ್ ಸಮಾಜದ ನಿರ್ಮಾಣದಲ್ಲಿ ಸಾಮೂಹಿಕತೆಗೆ ಮೂಲಭೂತ ಸ್ಥಾನವಿದೆ. ಆ ಸಮಾಜವು ಪರಸ್ಪರ ಸಹೋದರತೆಯಲ್ಲಿ ಸ್ಥಾಪಿಸಲ್ಪಡುವುದು. ಅಲ್ಲಾಹನ ಕಾನೂನಿನಂತೆ ವ್ಯವಹರಿಸುವುದು. ಪ್ರವಾದಿವರ್ಯರ (ಸ) ಜತೆಯಲ್ಲಿ ಸಂದೇಶ ಪ್ರಚಾರದ ಹೊಣೆಗಾರಿಕೆಯನ್ನು ನಿಭಾಯಿಸುವ, ಅವರ ನಿಧನಾನಂತರ ಆ ಸಂದೇಶದ ರಕ್ಷಣೆ ಮಾಡುವ ಮತ್ತು ಜಗತ್ತಿನ ಮೂಲೆಮೂಲೆಗೂ ಅದನ್ನು ಪಸರಿಸುವ ಒಂದು ಮುಸ್ಲಿಮ್ ಸಮಾಜ ನಿರ್ಮಾಣದ ಅಗತ್ಯವಿತ್ತು.

ಪ್ರವಾದಿವರ್ಯರು(ಸ) ಮಕ್ಕಾದ ಆರಂಭ ಕಾಲಘಟ್ಟದಲ್ಲಿ ಮುಸ್ಲಿಮ್ ವ್ಯಕ್ತಿಗಳ ತರಬೇತಿಯಲ್ಲಿ ತಲ್ಲೀನರಾದರು. ಏಕೆಂದರೆ ಅದು ಮುಸ್ಲಿಮ್ ಸಮಾಜದ ನಿರ್ಮಾಣದಲ್ಲಿ ಮೂಲಭೂತ ಸ್ಥಾನವನ್ನು ಹೊಂದಿದೆ. ಆ ತರಬೇತಿಯಲ್ಲಿ ಹಲವಾರು ಮಗ್ಗುಲುಗಳಿವೆ.

ಮೊದಲನೆಯದು – ವಿಶ್ವಾಸದ ಪರಿಷ್ಕರಣೆ

ಇಸ್ಲಾಮ್ ಜನರನ್ನು ವಿಗ್ರಹಗಳ ಆರಾಧನೆಯಿಂದ ಹೊರ ತಂದು ಏಕದೇವನಾದ ಅಲ್ಲಾಹನ ಆರಾಧನೆಯನ್ನು ಕಲಿಸಿದೆ. ಅಲ್ಲಾಹನ ಮೇಲೆ, ದೇವಚರರ ಮೇಲೆ, ದೇವಗ್ರಂಥಗಳ ಮೇಲೆ, ದೇವಸಂದೇಶವಾಹಕರ ಮೇಲೆ, ಪರಲೋಕದ ಮೇಲೆ ಮತ್ತು ದೇವವಿಧಿಗಳ ಮೇಲೆ ವಿಶ್ವಾಸ ತಾಳಲು ಕಲಿಸಿದೆ. ಜನರನ್ನು ಭೌತಿಕತೆಯ ಆರಾಧನೆಯಿಂದ ಅಲ್ಲಾಹನ ಆರಾಧನೆಗೆ ಕೊಂಡೊಯ್ಯಿತು, ಬೌದ್ಧಿಕ ಹಿಂದುಳಿಯುವಿಕೆಯಿಂದ ಮುಕ್ತಗೊಳಿಸಿತು, ಅವರ ಭಾವನೆ-ಸಂವೇದನೆಗಳನ್ನು ಗೌರವಿಸಿತು... ಹೀಗೆ ವಿಶ್ವಾಸವು ಅವರ ಹೃದಯದ ಆಳಕ್ಕೆ ಇಳಿಯಿತು. ಕೇವಲ ತಮ್ಮ ಗೋತ್ರ ಮತ್ತು ಕುಟುಂಬವನ್ನು ರಕ್ಷಿಸಲು ಜೀವ ಅರ್ಪಿಸುತ್ತಿದ್ದ ಜನರು ಧರ್ಮ ಮತ್ತು ವಿಶ್ವಾಸದ ರಕ್ಷಣೆಗೆ ಅರ್ಪಿತರಾದರು. ಅಲ್ಲಾಹನ ಸಂಪ್ರೀತಿಗಾಗಿ ಧರ್ಮಕ್ಕೆ ಸಹಕಾರ, ಅದನ್ನು ಹರಡಲು ಮತ್ತು ಜನರಿಗೆ ಅದನ್ನು ತಲುಪಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟರು.

ರಬಈ ಬಿನ್ ಆಮಿರ್(ರ)ರಂತಹ ಸಹಾಬಿಗಳು ಪರ್ಶಿಯದ ರುಸ್ತುಮ್‌ನ ದರಬಾರನ್ನು ಪ್ರವೇಶಿಸುವಾಗ, ಅಲ್ಲಿನ ಬಾಹ್ಯ ಅಲಂಕಾರಗಳಿಂದ ಪ್ರಭಾವಿತಗೊಳ್ಳಲಿಲ್ಲ. ರುಸ್ತುಮ್ ಕೇಳುತ್ತಾನೆ, "ಯಾಕೆ ಬಂದಿರಿ?" ಅವರು ಹೇಳುತ್ತಾರೆ, "ಅಲ್ಲಾಹನು ನಮ್ಮನ್ನು ಕಳುಹಿಸಿದ್ದಾನೆ. ನಿಮ್ಮನ್ನು ಸೃಷ್ಟಿಗಳ ಆರಾಧನೆಯಿಂದ ಹೊರ ತಂದು ಅಲ್ಲಾಹನ ಆರಾಧನೆಯ ಕಡೆಗೆ ಆಹ್ವಾನಿಸಲು, ಲೌಕಿಕತೆಯ ಸಂಕೀರ್ಣತೆಯಿಂದ ಹೊರ ತಂದು ಇಹ-ಪರಗಳ ಅನುಗ್ರಹದ ವಿಶಾಲತೆಯ ಕಡೆಗೆ ಕರೆ ತರಲು."

www.ujalfalah.com

ಎರಡನೆಯದು – ನೈತಿಕ ಔನ್ನತ್ಯ ಮತ್ತು ಕುರ್‌ಆನ್ ಶಿಕ್ಷಣದ ಸ್ವೀಕಾರ

ಅರೇಬಿಯಾದ ಬಹುಪಾಲು ಜನರು ಪಾಪ ಮತ್ತು ದುಷ್ಕೃತ್ಯದಲ್ಲಿ ತೊಡಗಿದ್ದರು. ಇಸ್ಲಾಮ್ ಜನರಿಗೆ ಪರಿಶುದ್ಧತೆ ಮತ್ತು ಸದಾಚಾರದ ಶಿಕ್ಷಣ ನೀಡಿತು. ಅದರ ಕಾರಣವಾಗಿ ಜನರು ದೃಷ್ಟಿಗಳನ್ನು ಕೆಳಗಿರಿಸಿದರು ಮತ್ತು ದುಷ್ಕರ್ಮ, ನಿರ್ಲಜ್ಜೆ ಮತ್ತು ಅಪರಾಧಗಳಿಂದ ದೂರವಾದರು. ಇದು ಅವರು ಅಲ್ಲಾಹನನ್ನು ಭಯಪಡುತ್ತಿದ್ದ ಕಾರಣ ಮತ್ತು ಇಸ್ಲಾಮಿನ ಶಿಕ್ಷಣವನ್ನು ಅನುಸರಿಸಲು ತೊಡಗಿದ ಕಾರಣದಿಂದಾಗಿತ್ತು. ಎಲ್ಲಾದರೂ ವ್ಯಭಿಚಾರದಂತಹ ಹೇಯ ಪಾಪವು ಸಂಭವಿಸಿ ಬಿಟ್ಟರೆ, ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ಹಾಜರಾಗಿ ಶಿಕ್ಷೆ ಜಾರಿಗೊಳಿಸಲು ವಿನಂತಿಸುತ್ತಿದ್ದರು. ಇದು ಅಲ್ಲಾಹನ ದರಬಾರಿನಲ್ಲಿ ಅವಮಾನಿತರಾಗುವುದರಿಂದ ರಕ್ಷೆ ಹೊಂದಲಿಕ್ಕಾಗಿತ್ತು.

ಇಸ್ಲಾಮಿನ ಆಗಮನಕ್ಕಿಂತ ಮುಂಚೆ ಅರಬರು ಮಾತು ಮಾತಿಗೂ ಖಡ್ಗ ಎತ್ತುತ್ತಿದ್ದರು. ಪರಸ್ಪರರ ಮೇಲೆ ಯಾವುದಾದರೂ ನೆಪದಿಂದ ಅಥವಾ ವಿನಾ ಕಾರಣ ಅಕ್ರಮ ಎಸಗುತ್ತಿದ್ದರು. ತೀರಾ ಕ್ಷುಲ್ಲಕ ಕಾರಣಕ್ಕೆ ಅವರ ನಡುವೆ ವರ್ಷಗಟ್ಟಲೆ ಯುದ್ಧ ಜಾರಿಯಲ್ಲಿರುತ್ತಿತ್ತು. ಇಸ್ಲಾಮ್ ಆಗತವಾದ ಮೇಲೆ ಈ ಎಲ್ಲ ಅಕ್ರಮಗಳನ್ನು ನಿಷೇಧಿಸಲಾಯಿತು. ಎಲ್ಲೆಡೆ ಶಾಂತಿ–ಸಮಾಧಾನವು ವ್ಯಾಪಿಸಿತು ಮತ್ತು ಜನರು ಅಕ್ರಮ–ಅನ್ಯಾಯದ ಬದಲು ದಯಾವಂತಿಕೆಯನ್ನು ಪ್ರದರ್ಶಿಸತೊಡಗಿದರು.

ಮೂರನೆಯದು – ಅಲ್ಲಾಹ್ ಮತ್ತು ಸಂದೇಶವಾಹಕರ(ಸ) ತೀರ್ಪಿನ ಅಂಗೀಕಾರ

ಅರಬರಲ್ಲಿ ಪರಸ್ಪರ ಪಾರಂಪರ್ಯವಾಗಿ ನಡೆದು ಬರುತ್ತಿದ್ದ ಸಂಪ್ರದಾಯಗಳು ಮತ್ತು ಸ್ವಂತ ಚಿತ್ತಾಕಾಂಕ್ಷೆಗಳ ಪ್ರಕಾರ ತೀರ್ಪುಗಳನ್ನು ನೀಡಲಾಗುತ್ತಿತ್ತು. ಇಸ್ಲಾಮ್ ಆಗತವಾದ ಮೇಲೆ ಅಜ್ಞಾನವು ಅಳಿಯಿತು ಮತ್ತು ಅಲ್ಲಾಹನ ಆದೇಶಗಳನ್ನು ಜಾರಿಗೊಳಿಸಲಾಯಿತು. ಅಲ್ಲಾಹ್ ಹೇಳುತ್ತಾನೆ,

﴿ فَلَا وَرَبِّكَ لَا يُؤْمِنُونَ حَتَّىٰ يُحَكِّمُوكَ فِيمَا شَجَرَ بَيْنَهُمْ ثُمَّ لَا يَجِدُوا فِي أَنفُسِهِمْ حَرَجًا مِّمَّا قَضَيْتَ وَيُسَلِّمُوا تَسْلِيمًا ﴿٦٥﴾ ﴾ النساء: ٦٥

"ಓ ಮುಹಮ್ಮದರೇ! ನಿಮ್ಮ ಪ್ರಭುವಿನಾಣೆ, ಇವರು ತಮ್ಮೊಳಗಿನ ಭಿನ್ನಾಭಿಪ್ರಾಯಗಳಲ್ಲಿ ನಿಮ್ಮನ್ನು ತೀರ್ಪು ನೀಡುವವರೆಂದು ಒಪ್ಪಿಕೊಂಡು ಆ ಬಳಿಕ ನೀವು ಕೊಟ್ಟ ತೀರ್ಪಿನ ಬಗ್ಗೆ ತಮ್ಮ ಮನಸ್ಸಿನಲ್ಲೂ ಯಾವುದೇ ಸಂಕೋಚ ಪಡದೆ ಅದನ್ನು ಸರ್ವ ಸಂಪೂರ್ಣವಾಗಿ ಒಪ್ಪಿಕೊಳ್ಳುವ ವರೆಗೂ ಅವರು ಖಂಡಿತ ಸತ್ಯವಿಶ್ವಾಸಿಗಳಾಗಲಾರರು." (ಪವಿತ್ರ ಕುರ್‌ಆನ್: 4: 65)

ನಾಲ್ಕನೆಯದು – ವೈಯಕ್ತಿಕ ಉತ್ತರದಾಯಿತ್ವ ಮತ್ತು ಧರ್ಮದ ಪಾಲನೆ

ಇಸ್ಲಾಮ್ ವೈಯಕ್ತಿಕ ಉತ್ತರದಾಯಿತ್ವಕ್ಕೆ ಬಹಳ ಒತ್ತು ನೀಡಿದೆ. ಅದನ್ನು ಇಸ್ಲಾಮ್ ಹೊಣೆಗಾರಿಕೆಯ ಆಧಾರವೆಂದು ಸಾರಿದೆ. ಇಸ್ಲಾಮಿಗೆ ಮುಂಚೆ ಅರಬರು ತಮ್ಮ ಗೋತ್ರಗಳಿಗೆ ಸಹಾಯ ಮಾಡುತ್ತಿದ್ದರು. ಅವರು ಮರ್ದಕರಾಗಿದ್ದರೂ ಸರಿ, ಮರ್ದಿತರಾಗಿದ್ದರೂ ಸರಿ. ತಮ್ಮವರು ಸತ್ಯದಲ್ಲಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸದೆ ಸಹಾಯ ಮಾಡುತ್ತಿದ್ದರು. ಬಳಿಕ ಇಸ್ಲಾಮ್ ಆಗತವಾಯಿತು. ಅದು ಜನರಿಗೆ ಅಲ್ಲಾಹನ ಮುಂದೆ ಲೆಕ್ಕ ಸಮರ್ಪಣೆಗೆ ವೈಯಕ್ತಿಕ ಉತ್ತರದಾಯಿತ್ವವೇ ಆಧಾರವಾಗಿದೆ ಎಂದು ಕಲಿಸಿತು. ಹೀಗೆ ಅವರು ತಮ್ಮ ಧರ್ಮದ ಕುರಿತು ಪ್ರಾಮಾಣಿಕರಾದರು. ಅಲ್ಲಾಹ್ ಹೇಳುತ್ತಾನೆ,

﴿ إِنَّمَا وَلِيُّكُمُ اللَّهُ وَرَسُولُهُ وَالَّذِينَ آمَنُوا الَّذِينَ يُقِيمُونَ الصَّلَاةَ وَيُؤْتُونَ الزَّكَاةَ وَهُمْ رَاكِعُونَ ﴿٥٥﴾ وَمَن يَتَوَلَّ اللَّهَ وَرَسُولَهُ وَالَّذِينَ آمَنُوا فَإِنَّ حِزْبَ اللَّهِ هُمُ الْغَالِبُونَ ﴿٥٦﴾ ﴾ المائدة: ٥٥ - ٥٦

www.IslamFalah.com

“ನಿಮ್ಮ ಆಪ್ತ ಮಿತ್ರರು ವಾಸ್ತವದಲ್ಲಿ ಅಲ್ಲಾಹ್, ಅಲ್ಲಾಹನ ಸಂದೇಶವಾಹಕರು ಮತ್ತು ನಮಾಝನ್ನು ಸಂಸ್ಥಾಪಿಸುವ, ಝಕಾತ್ ಕೊಡುವ ಹಾಗೂ ಅಲ್ಲಾಹನ ಮುಂದೆ ಬಾಗುವ ಸತ್ಯವಿಶ್ವಾಸಿಗಳು ಮಾತ್ರ. ಅಲ್ಲಾಹನನ್ನು ಅವನ ಸಂದೇಶವಾಹಕರನ್ನು ಮತ್ತು ಸತ್ಯವಿಶ್ವಾಸಿಗಳನ್ನು ತಮ್ಮ ಆಪ್ತ ಮಿತ್ರರನ್ನಾಗಿ ಮಾಡಿಕೊಂಡವನು ಅಲ್ಲಾಹನ ಪಕ್ಷವೇ ವಿಜಯ ಹೊಂದುವ ಪಕ್ಷವೆಂದು ಅರಿತಿರಬೇಕು.” (ಪವಿತ್ರ ಕುರ್‌ಆನ್: 5: 55–56)

* * * * *

www.uzairfalahi.com